## ನಿಸ್ಪೃಹದನಿ

# ಸಮಾನತೆ-ಸೌಹಾರ್ದದ ಭಾರತದಲ್ಲಿ ದುಃಸ್ವಪ್ನಗಳಿಗೆ ಜಾಗವಿಲ್ಲದಿರಲಿ

ಈವರೆಗೆ ನಮ್ಮ ನಡುವೆ ನಮ್ಮವರಾಗಿಯೇ ನಿರುಮ್ಮಳವಾಗಿ ಬದುಕುತ್ತಿದ್ದ ಒಂದು ವರ್ಗ, ಈಗ ಅಸುರಕ್ಷಿತ ಭಾವ ಅನುಭವಿಸುತ್ತಿದೆ. ಅವರ ಉಮ್ಮಳವನ್ನು ಸಾವಧಾನದಿಂದ ಆಲಿಸಿ, ಅಸುರಕ್ಷಿತ ಭಾವವನ್ನು ತೊಡೆದುಹಾಕಬೇಕಾದವರು ಒಡಕುಗಳನ್ನು ಸೃಷ್ಟಿಸುತ್ತಿದ್ದಾರೆ. ಈ ಕೆಡುಕಿನ ಅಪಾಯಗಳನ್ನು ಮನಗಾಣುವ ಹಾಗೂ ಸೌಹಾರ್ದ ಭಾರತದ ಪರಂಪರೆಯನ್ನು ಉಳಿಸಿಕೊಳ್ಳುವ ಶಕ್ತಿಯನ್ನು ಹೊಸ ವರ್ಷ ನಮಗೆ ದಯಪಾಲಿಸಲಿ.




ಸಂಭ್ರಮ ಹುಟ್ಟಿಸಬೇಕಾಗಿದ್ದ ಹೊಸ ವರ್ಷದ ಆರಂಭ ಸೂತಕದ ಸ್ಪರ್ಶದೊಂದಿಗೆ ಆರಂಭವಾಗುತ್ತಿದೆ. ಪೌರತ್ವ (ತಿದ್ದುಪಡಿ) ಮಸೂದೆ ಕಾರಣದಿಂದಾಗಿ ಸಮುದಾಯಗಳಲ್ಲಿ ಉಂಟಾಗಿರುವ ಅಪನಂಬಿಕೆ ಹಿಂಸೆಗೂ ರಕ್ತಪಾತಕ್ಕೂ ಕಾರಣವಾಗಿದೆ. ಗಾಂಧಿ ಮಹಾತ್ಮನನ್ನು ಮತ್ತೆ ಮತ್ತೆ ನೆನಪಿಸಿಕೊಳ್ಳಬೇಕಾದ ಸಂದರ್ಭವಿದು. 'ಬಹುತ್ವ ಭಾರತ'ದ ಸಾಕಾರಕ್ಕಾಗಿ, ಮಾನವೀಯ ಸಮಾಜಕ್ಕಾಗಿ ಕನವರಿಸಿ, ಆ ಪ್ರಯತ್ನದಲ್ಲೇ ಕೊನೆಯುಸಿರೆಳೆದ ಮಹಾನ್ ಸಂತ ಗಾಂಧೀಜಿ. ಸ್ವಾತಂತ್ರ್ಯಪೂರ್ವದಲ್ಲಿ ಈಗ ಬಾಂಗ್ಲಾದೇಶದಲ್ಲಿರುವ ನೌಖಾಲಿ ಎನ್ನುವ ಪ್ರದೇಶದಲ್ಲಿ ಕೋಮುಗಲಭೆ–ಹಿಂಸಾಚಾರ ನಡೆದಾಗ, ಅಲ್ಲಿ ಗಾಂಧಿ ನಡೆಸಿದ ಶಾಂತಿಸ್ಥಾಪನೆಯ ಪ್ರಯತ್ನದಲ್ಲಿ ನಮ್ಮೆಲ್ಲರಿಗೂ ಪಾಠವಿದೆ. ಹಿಂಸೆ ನಡೆದ ಹಳ್ಳಿ ಹಳ್ಳಿಗೂ ಗಾಂಧೀಜಿ ಭೇಟಿ ನೀಡುತ್ತಾರೆ. ಆವರೆಗೆ ಗಾಂಧೀಜಿ ನಂಬಿಕೊಂಡು ಬಂದಿದ್ದ ಮೌಲ್ಯಗಳ ಅಗ್ನಿಪರೀಕ್ಷೆಯ ರೂಪದಲ್ಲಿ ನೌಖಾಲಿ ಅವರಿಗೆ ಎದುರಾಗುತ್ತದೆ. ಬಂಧುಮಿತ್ರರನ್ನು ಕಳೆದುಕೊಂಡ ನತದೃಷ್ಟರು, ಅತ್ಯಾಚಾರಕ್ಕೆ ಒಳಗಾದ ಹೆಣ್ಣುಮಕ್ಕಳು, ಗಾಯಾಳುಗಳು, ಸಮಾಜದ ಮೇಲೆಯೇ ನಂಬಿಕೆ ಕಳಕೊಂಡ ಅಸಹಾಯಕರು – ಇವರನ್ನೆಲ್ಲ ಭೇಟಿಯಾಗಿ ಗಾಂಧೀಜಿ ತತ್ತರಿಸುತ್ತಾರೆ, ಮಮ್ಮಲ ಮರುಗುತ್ತಾರೆ. ಅವರು ಸಾಗುತ್ತಿದ್ದ ಹಾದಿ ಸಲೀಸಾದುದಾಗಿರಲಿಲ್ಲ. ಶಾಂತಿದೂತನ ಆಗಮನವನ್ನು ವಿರೋಧಿಸುವ ಕೆಲವರು ಅವರು ನಡೆವ ದಾರಿಯಲ್ಲಿ ಮಲ–ಮೂತ್ರ ಚೆಲ್ಲುತ್ತಾರೆ. ಆದರೆ, ಸೌಹಾರ್ದದ ಕನಸುಗಾರನ ಗುರಿ ಗಮ್ಯವಾಗಿತ್ತೇ ಹೊರತು, ದಾರಿಯಲ್ಲಿ ಏನಿದೆ ಎನ್ನುವುದಾಗಿರಲಿಲ್ಲ. ಕಲಕತ್ತಾ ಹೊತ್ತಿ ಉರಿದಾಗ ಕೂಡ ಗಾಂಧೀಜಿ ಹೀಗೆಯೇ ಕಣ್ಣೀರು ಒರೆಸುವ ಕೆಲಸ ಮಾಡಿದ್ದರು.

ಈ ಹೊತ್ತಿನ ಅಪನಂಬಿಕೆಯ ಭಾರತ ನೌಕಾಲಿಯ ಪರಿಸ್ಥಿತಿಯನ್ನೇ ನೆನಪಿಸುತ್ತಿದೆ. ವಿಷಾದದ ಸಂಗತಿಯೆಂದರೆ, ನೌಖಾಲಿಗಳ ಸಂಖ್ಯೆ ಹೆಚ್ಚುತ್ತಲೇ ಇದೆ; ಗಾಂಧಿಯ ಮಾತಿರಲಿ, ಆ ವ್ಯಕ್ತಿತ್ವದ ನೆರಳಿನಂತಹ ನಾಯಕರು ಕೂಡ ಕಾಣಿಸುತ್ತಿಲ್ಲ. ನಂಬಿಕೆ ಮತ್ತು ಮಮತೆಯ ಮಾತುಗಳ ಮೂಲಕ ಪರಿಸ್ಥಿತಿಯನ್ನು ತಹಬಂದಿಗೆ ತರುವ ಬದಲಿಗೆ, ಪೊಲೀಸ್ ಲಾಠಿ – ಬಂದೂಕಿನ ಶಕ್ತಿಯ ಮೂಲಕ ಪ್ರತಿಭಟನೆಯನ್ನು ಹತ್ತಿಕ್ಕಲು ಪ್ರಯತ್ನಿಸುವುದು ಪ್ರಜಾಪ್ರಭುತ್ವ ವ್ಯವಸ್ಥೆಗೆ ತಕ್ಕುದಲ್ಲ. ಪೊಲೀಸರು ಬಲಪ್ರಯೋಗದ ಮೂಲಕ ಪ್ರತಿಭಟನೆಯನ್ನು ಹತ್ತಿಕ್ಕಬಲ್ಲರೇ ಹೊರತು, ಮನಸ್ಸುಗಳ ತಳಮಳವನ್ನು ತೊಡೆಯಲಾರರು. ಆ ನೋವನ್ನು ಅಳಿಸುವ ಕೆಲಸವನ್ನು ಶಾಸಕಾಂಗ ವ್ಯವಸ್ಥೆಯಲ್ಲಿ ಜವಾಬ್ದಾರಿ ಸ್ಥಾನಗಳಲ್ಲಿರುವವರು ಮಾಡಬೇಕು. ಆದರೆ, ನಮ್ಮ ಪ್ರತಿನಿಧಿಗಳು ಮಾಡಿದ್ದು, ಪರಸ್ಪರ ಕೆಸರು ಎರಚಿಕೊಳ್ಳುವ ಕೆಲಸ. ನಡೆದ ಘಟನಾವಳಿಗಳ ಬಗ್ಗೆ ಪ್ರಜಾಪ್ರತಿನಿಧಿಗಳ ಮಾತುಗಳಲ್ಲಿ ನೋವಿಗಿಂತಲೂ ಹೆಚ್ಚಾಗಿ, ಆ ಘಟನೆಗಳನ್ನು ಎದುರಾಳಿಗಳ ತಲೆಗೆ ಕಟ್ಟುವ ಉತ್ಸಾಹವೇ ಹೆಚ್ಚಾಗಿತ್ತು. ಪ್ರತಿಭಟನೆ ನಡೆಸುವವರು ಒಂದು ವರ್ಗದ ಪಾಲಿಗೆ ವಿರೋಧಿಗಳಾಗಿ ಕಾಣಿಸಿದರು. ಸಮಸ್ಯೆ ಇರುವುದು ಇಲ್ಲಿಯೇ; ಒಂದು ವರ್ಗವನ್ನು ವಿರೋಧಿಗಳ ರೂಪದಲ್ಲಿ ಕಲ್ಪಿಸಿಕೊಂಡ ತಕ್ಷಣ ಸಂವಹನದ ಸಾಧ್ಯತೆಗಳು ಮುಚ್ಚಿಕೊಂಡುಬಿಡುತ್ತವೆ.

ನಡೆಯಬಾರದಾಗಿದ್ದ ದುರಂತ ನಡೆದುಹೋಯಿತು. ಈಗ ಆಗಬೇಕಾದುದು ಕದಡಿದ ಕೊಳವನ್ನು ತಿಳಿಗೊಳಿಸುವ ಕೆಲಸ. ಆ ಕೆಲಸಕ್ಕೆ ಹೊಸ ವರ್ಷ ನೆಪವಾಗಬೇಕು. ಪ್ರತಿ ವರ್ಷವೂ ಗೋಡೆಗೆ ಹೊಸ ಕ್ಯಾಲೆಂಡರ್ ಏರಿಸುವಾಗ, ಆ ಕ್ಯಾಲೆಂಡರ್ ಹೊಸ ಹೊಸ ಕನಸುಗಳನ್ನೂ ಅರಳಿಸುತ್ತದೆ. ಹೊಸ ವರ್ಷ ಹೊಸ ಸಂಕಲ್ಪಕ್ಕೆ ನಾಂದಿ. ಪ್ರಸ್ತುತ ನಮ್ಮನ್ನು ಎದುರುಗೊಳ್ಳುತ್ತಿರುವ ಹೊಸ ಕ್ಯಾಲೆಂಡರ್ ವರ್ಷವೂ ಹೊಸ ಆಶಯಗಳಿಗೆ ಕಾರಣವಾಗಲಿದೆ. ಈ ಸಲ ನಮ್ಮ ಕನಸು–ಆಶಯಗಳು ಪ್ರಜ್ಞಾಪೂರ್ವಕವಾಗಿ ಮತ್ತಷ್ಟು ವಿಸ್ತಾರಗೊಳ್ಳಬೇಕು. ವೈಯಕ್ತಿಕ ಸುಖದ ಬಗ್ಗೆ ಯೋಚಿಸುವುದು ಇದ್ದೇಇದೆ. ಸಾಮುದಾಯಿಕ ಹಿತದ ಬಗ್ಗೆ ಯೋಚಿಸಲೇಬೇಕಾದ ಸಂದರ್ಭವಿದು. ಒಂದೆಡೆ ಸಮಾಜದ ಆರೋಗ್ಯ ಕೆಡುತ್ತಿದೆ. ಇನ್ನೊಂದೆಡೆ ಪರಿಸರ ಕಲುಷಿತಗೊಳ್ಳುತ್ತಿದೆ. 'ಸರ್ವ ಜನಾಂಗದ ಶಾಂತಿಯ ತೋಟ' ಎನ್ನುವಂತಿದ್ದ ಸಮಾಜ, ಈಗ ಧರ್ಮಗಳ ಹೆಸರಿನಲ್ಲಿ ಪ್ರತ್ಯೇಕ ಗೋಡೆಗಳನ್ನು ನಿರ್ಮಿಸಿಕೊಳ್ಳುತ್ತಿದೆ. ಈವರೆಗೆ ನಮ್ಮ ನಡುವೆ ನಮ್ಮವರಾಗಿಯೇ ನಿರುಮ್ಮಳವಾಗಿ ಬದುಕುತ್ತಿದ್ದ ಒಂದು ವರ್ಗ, ಈಗ ಇದ್ದಕ್ಕಿದ್ದಂತೆ ಅಸುರಕ್ಷಿತ ಭಾವ ಅನುಭವಿಸುತ್ತಿದೆ. ಅವರ ಉಮ್ಮಳವನ್ನು ಸಾವಧಾನದಿಂದ ಆಲಿಸಬೇಕಾದವರು, ಅವರ ಅಸುರಕ್ಷಿತ ಭಾವವನ್ನು ತೊಡೆದುಹಾಕಬೇಕಾದವರು ಹೊಸ ಹೊಸ ಸಂಕಥನಗಳನ್ನು ಕಟ್ಟುವ ಮೂಲಕ ಒಡಕುಗಳನ್ನು ಸೃಷ್ಟಿಸುತ್ತಿದ್ದಾರೆ. ಈ ಕೆಡುಕಿನ ಅಪಾಯಗಳನ್ನು ಮನಗಾಣುವ ಹಾಗೂ ಸೌಹಾರ್ದ ಭಾರತದ ಪರಂಪರೆಯನ್ನು ಉಳಿಸಿಕೊಳ್ಳುವ ಶಕ್ತಿಯನ್ನು ಹೊಸ ವರ್ಷ ನಮಗೆ ದಯಪಾಲಿಸಲಿ. 2010 ನಮ್ಮಲ್ಲಿ ಹೊಸ ಕನಸುಗಳನ್ನು ಹುಟ್ಟಿಹಾಕದಿದ್ದರೂ ಚಿಂತೆಯಿಲ್ಲ; ದುಃಸ್ವಪ್ನಗಳಿಗೆ ಕಾರಣವಾಗದಿರಲಿ.

■ **ರಘುನಾಥ ಚ.ಹ.**